**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಪರೀಕ್ಷೆ/ಖಾ.ಅ.ನೊ./2018-19. ದಿನಾಂಕ: 28.07.2018.

# ಅಧಿಸೂಚನೆ

ವಿಷಯ: 2019ರ ಮಾರ್ಚ್ ತಿಂಗಳಿನಲ್ಲಿ ನಡೆಸಲಾಗುವ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ242ಟಿಪಿಯು81 ದಿ: 02.11.1981
2. ಸರ್ಕಾರದ ಪತ್ರ ಸಂಖ್ಯೆ: ಇಡಿ125ಟಿಪಿಯು90 ದಿ: 03.07.1992
3. ಸರ್ಕಾರದ ಆದೇಶ ಸಂಖ್ಯೆ: ಇಡಿ159ಟಿಪಿಯು96 ದಿ: 20.09.1996.
4. ಸರ್ಕಾರದ ಆದೇಶ ಸಂಖ್ಯೆ: ಇಡಿ09ಟಿಪಿಯು2005 ದಿ: 31.05.2005.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 195 ಡಿಜಿಡಿ 2017 ದಿ:20.03.2018.

* * * *

ಪದವಿ ಪೂರ್ವ ಶಿಕ್ಷಣ ಇಲಾಖೆಯು ನಡೆಸುತ್ತಿರುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಉಲ್ಲೇಖಿತ ಸರ್ಕಾರದ ಆದೇಶದನ್ವಯ ಪಿಯುಸಿ ಶಿಕ್ಷಣ ಬೋಧಿಸುವ **ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾತ್ರ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ.** ಅದರಂತೆ 2019ರ ಮಾರ್ಚ್ ತಿಂಗಳಿನಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು OMR ಅರ್ಜಿಗಳನ್ನು ಈ ಅಧಿಸೂಚನೆಯೊಂದಿಗೆ ಕಳುಹಿಸಿಕೊಡಲಾಗಿದೆ. ದಿನಾಂಕ:06.08.2018 ರಿಂದ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

OMR ನಮೂನೆಗಳಲ್ಲಿ ಅಭ್ಯರ್ಥಿಯ ವಿವರಗಳನ್ನು ಭರ್ತಿ ಮಾಡಿ ಶೇಡಿಂಗ್ ಮಾಡುವಲ್ಲಿ ಪ್ರಾಂಶುಪಾಲರು ಉಪನ್ಯಾಸಕರ ಸಹಕಾರವನ್ನು ಪಡೆದುಕೊಳ್ಳುವುದು. ಅಭ್ಯರ್ಥಿಯ ಭಾವಚಿತ್ರವನ್ನು ಖಾತರಿಪಡಿಸಿಕೊಂಡು OMR ನಮೂನೆಯ ನಿಗದಿತ ಅಂಕಣದಲ್ಲಿ ಅಂಟಿಸಬೇಕು. OMR ನಮೂನೆಯಲ್ಲಿನ ವಿವರಗಳನ್ನು ಮತ್ತು ಭಾವಚಿತ್ರಗಳನ್ನು ಸ್ಕ್ಯಾನಿಂಗ್ ಮಾಡಲಾಗುವುದರಿಂದ ಹೆಚ್ಚು ಎಚ್ಚರಿಕೆ ವಹಿಸುವುದು. OMR ನಮೂನೆಗಳಲ್ಲಿ ವಿವರಗಳನ್ನು **ಕಪ್ಪು ಬಾಲ್‌ಪಾಯಿಂಟ್** ಪೆನ್ನಿನಿಂದಲೇ ಭರ್ತಿ ಮಾಡಿ ಶೇಡಿಂಗ್ ಮಾಡುವುದು. **OMR ನಮೂನೆಗಳಿಗೆ ಕ್ರಮಾಂಕಗಳನ್ನು 6001 ರಿಂದ ನೀಡುವುದು.**

**ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಕಡ್ಡಾಯವಾಗಿ ಇರಬೇಕಾದ ಅರ್ಹತೆಗಳು ಹಾಗೂ ಸೂಚನೆಗಳು:**

1. ದಿನಾಂಕ **31-03-2019ಕ್ಕೆ 17** ವರ್ಷಗಳು ತುಂಬಿರಬೇಕು (**31-03-2002ರ** ಮೊದಲು ಜನಿಸಿರಬೇಕು).
2. ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ / ಸಿ.ಬಿ.ಎಸ್.ಇ / ಐ.ಸಿ.ಎಸ್.ಇ / ಎನ್.ಐ.ಒ.ಎಸ್.ಗಳಲ್ಲಿ ವ್ಯಾಸಂಗ ಮಾಡಿ ಹಾಗೂ 2018ರ ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
3. ಇತರೆ ರಾಜ್ಯಗಳ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ / 10ನೇ ತರಗತಿ ಪರೀಕ್ಷೆ ತೆಗೆದುಕೊಂಡು, ಪರೀಕ್ಷೆಗೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಥವಾ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿರಬೇಕು ಹಾಗೂ 2018ರ ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
4. ಪದವಿ ಪೂರ್ವ ಶಿಕ್ಷಣ ಇಲಾಖೆಯ ದಾಖಲಾತಿ **ಮಾರ್ಗಸೂಚಿ ಪಟ್ಟಿಯಲ್ಲಿರುವ ಸೆಕೆಂಡರಿ ಎಜುಕೇಷನ್ ಬೋರ್ಡ್‌ಗಳಿಂದ** 10ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ದ್ವಿತೀಯ ಪಿಯುಸಿಗೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ.
5. ಪ್ರಥಮ ಪಿ.ಯು.ಸಿ. ಅನುತ್ತೀರ್ಣರಾದವರು, ಪರೀಕ್ಷೆಗೆ ಹಾಜರಾಗದವರು, ವ್ಯಾಸಂಗವನ್ನು ಮುಂದುವರಿಸದವರು ಖಾಸಗಿ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ನೋಂದಾಯಿಸಲು ಅರ್ಹರಾಗಿರುತ್ತಾರೆ.
6. ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಐ.ಟಿ.ಐ., ಜೆ.ಓ.ಸಿ., ಡಿಪ್ಲೊಮೊ ಇತ್ಯಾದಿ ತರಗತಿಗಳಿಗೆ ದಾಖಲಾಗಿ ಅನುತ್ತೀರ್ಣಗೊಂಡು ಅಲ್ಲಿ ವ್ಯಾಸಂಗ ಮುಂದುವರಿಸದವರು ಖಾಸಗಿ

ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ನೋಂದಾಯಿಸಲು ಅರ್ಹರಾಗಿರುತ್ತಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಬೇರೆ ಸಂಯೋಜನೆಯಲ್ಲಿ ಖಾಸಗಿ ಅಭ್ಯರ್ಥಿಯಾಗಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ.

7. ಅಂಧ ವಿದ್ಯಾರ್ಥಿಗಳಿಗೆ ವಾಸಸ್ಥಳ / ಉದ್ಯೋಗ ಸ್ಥಳ/ ಅಂಧಶಾಲೆ ಇರುವ ಸ್ಥಳದ ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಲು ಅವಕಾಶ ನೀಡಬಹುದಾಗಿದೆ.
8. ಬೆಂಗಳೂರು ನಗರ ಜಿಲ್ಲೆಯಲ್ಲಿನ ಅಭ್ಯರ್ಥಿಗಳು ಕಡ್ಡಾಯವಾಗಿ ಬೆಂಗಳೂರು ನಗರದ ಅವರ ವಾಸಸ್ಥಳ /ಉದ್ಯೋಗದ ಹತ್ತಿರದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿಯೇ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು.
9. ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ಅಭ್ಯರ್ಥಿಯು ತನ್ನ ವಾಸಸ್ಥಾನಕ್ಕೆ ಹತ್ತಿರವಾಗಿರುವ ಅಥವಾ ಉದ್ಯೋಗ ಮಾಡುವ ಸ್ಥಳಕ್ಕೆ ಸಮೀಪದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾತ್ರ ಹೆಸರನ್ನು ನೋಂದಾಯಿಸಿಕೊಳ್ಳಲು ಅವಕಾಶವಿದೆ.
10. ವಾಸಸ್ಥಳದ ಖಾತರಿಗಾಗಿ ವಾಸಸ್ಥಳದ ವಿಳಾಸ ವಿವರವಿರುವ ಈ ಕೆಳಗಿನ ಯಾವುದಾದರು ಒಂದು ದೃಢೀಕರಿಸಿದ ದಾಖಲೆಯನ್ನು ಸಲ್ಲಿಸುವುದು :
    - ಮತದಾರರ ಗುರುತು ಚೀಟಿ.
    - ಪಡಿತರ ಚೀಟಿ.
    - ಬ್ಯಾಂಕ್ ಖಾತೆ ಪಾಸ್ ಬುಕ್.
    - ಡ್ರೈವಿಂಗ್ ಲೈಸನ್ಸ್.
11. ಖಾಸಗಿ ಅಭ್ಯರ್ಥಿಗಳು ಆಧಾರ ಕಾರ್ಡ್‌ನ ದೃಢೀಕೃತಿ ಪ್ರತಿಯನ್ನು ಸಲ್ಲಿಸಲು ಸೂಚಿಸಿದೆ.

**II.** **ಖಾಸಗಿ ಅಭ್ಯರ್ಥಿಗಳು ಭಾಗ-1ರಲ್ಲಿ ಎರಡು ಭಾಷಾ ವಿಷಯಗಳನ್ನು ಹಾಗೂ ಭಾಗ-2ರಲ್ಲಿ ಕಲಾ ಅಥವಾ ವಾಣಿಜ್ಯ ಸಂಯೋಜನೆಯಲ್ಲಿ ಮಾತ್ರ ನಾಲ್ಕು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು.**

**ಭಾಗ-1: (Part – 1)**

| ಕ್ರ. ಸಂ. | ವಿಷಯ | Subject | ವಿಷಯ ಸಂಕೇತ |
|---|---|---|---|
| 1. | ಕನ್ನಡ | Kannada | 01 |
| 2. | ಇಂಗ್ಲೀಷ್ | English | 02 |
| 3. | ಹಿಂದಿ | Hindi | 03 |
| 4. | ತಮಿಳು | Tamil | 04 |
| 5. | ತೆಲಗು | Telugu | 05 |
| 6. | ಮಲಯಾಳಂ | Malayalam | 06 |
| 7. | ಮರಾಠಿ | Marathi | 07 |
| 8. | ಉರ್ದು | Urdu | 08 |
| 9. | ಸಂಸ್ಕೃತ | Sanskrit | 09 |
| 10. | ಅರೇಬಿಕ್ | Arabic | 11 |

**ಭಾಗ-2:**

**(ಭಾಗ-2 ರಲ್ಲಿ ಈ ಕೆಳಗೆ ನೀಡಿರುವ ವೃಂದಗಳಂತೆ ಮಾತ್ರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು)**

**ಕಲಾ ಸಂಯೋಜನೆ:**

| ಕ್ರ ಸಂ | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆ | | | | | | | |
|---|---|---|---|---|---|---|---|---|
| 1. | ಇತಿಹಾಸ | 21 | ಅರ್ಥಶಾಸ್ತ್ರ | 22 | ಸಮಾಜಶಾಸ್ತ್ರ | 28 | ರಾಜ್ಯಶಾಸ್ತ್ರ | 29 |
| 2. | ಇತಿಹಾಸ | 21 | ಅರ್ಥಶಾಸ್ತ್ರ | 22 | ಭೂಗೋಳಶಾಸ್ತ್ರ | 24 | ರಾಜ್ಯಶಾಸ್ತ್ರ | 29 |
| 3. | ಇತಿಹಾಸ | 21 | ಅರ್ಥಶಾಸ್ತ್ರ | 22 | ತರ್ಕಶಾಸ್ತ್ರ | 23 | ರಾಜ್ಯಶಾಸ್ತ್ರ | 29 |
| 4. | ಇತಿಹಾಸ | 21 | ಅರ್ಥಶಾಸ್ತ್ರ | 22 | ರಾಜ್ಯಶಾಸ್ತ್ರ | 29 | ಐಚ್ಛಿಕ ಕನ್ನಡ | 16 |
| 5. | ಇತಿಹಾಸ | 21 | ಅರ್ಥಶಾಸ್ತ್ರ | 22 | ರಾಜ್ಯಶಾಸ್ತ್ರ | 29 | ಶಿಕ್ಷಣ | 52 |
| 6. | ಇತಿಹಾಸ | 21 | ಅರ್ಥಶಾಸ್ತ್ರ | 22 | ಸಮಾಜಶಾಸ್ತ್ರ | 28 | ಶಿಕ್ಷಣ | 52 |

ವಾಣಿಜ್ಯ ಸಂಯೋಜನೆ :

| ಕ್ರ ಸಂ | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆ | | | | | | | |
|---|---|---|---|---|---|---|---|---|
| 1. | ಇತಿಹಾಸ | 21 | ಅರ್ಥಶಾಸ್ತ್ರ | 22 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 |
| 2. | ಅರ್ಥಶಾಸ್ತ್ರ | 22 | ಭೂಗೋಳಶಾಸ್ತ್ರ | 24 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 |
| 3. | ಅರ್ಥಶಾಸ್ತ್ರ | 22 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 | ಬೆಸಿಕ್ ಮ್ಯಾಥ್ಸ್ | 75 |
| 4. | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 | ಸಂಖ್ಯಾಶಾಸ್ತ್ರ | 31 | ಬೆಸಿಕ್ ಮ್ಯಾಥ್ಸ್ | 75 |

**(Part – 2)**

(Candidates should select subjects as per the Group)

**Arts Combination:**

| Sl. No. | Subjects & Subject Code Numbers | | | | | | | |
|---|---|---|---|---|---|---|---|---|
| 1. | History | 21 | Economics | 22 | Sociology | 28 | Political Science | 29 |
| 2. | History | 21 | Economics | 22 | Geography | 24 | Political Science | 29 |
| 3. | History | 21 | Economics | 22 | Logic | 23 | Political Science | 29 |
| 4. | History | 21 | Economics | 22 | Political Science | 29 | Optional Kannada | 16 |
| 5. | History | 21 | Economics | 22 | Political Science | 29 | Education | 52 |
| 6. | History | 21 | Economics | 22 | Sociology | 28 | Education | 52 |

**Commerce Combination:**

| Sl. No. | Subjects & Subject Code Numbers | | | | | | | |
|---|---|---|---|---|---|---|---|---|
| 1. | History | 21 | Economics | 22 | Business Studies | 27 | Accountancy | 30 |
| 2. | Economics | 22 | Geography | 24 | Business Studies | 27 | Accountancy | 30 |
| 3. | Economics | 22 | Business Studies | 27 | Accountancy | 30 | Basic Maths | 75 |
| 4. | Business Studies | 27 | Accountancy | 30 | Statistics | 31 | Basic Maths | 75 |

## ವಿಶೇಷ ಸೂಚನೆ

1. ರೆಗ್ಯೂಲರ್ ಅಥವಾ ರಿಪೀಟರ್ ಅಭ್ಯರ್ಥಿಗಳಾಗಿ 2019ರ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ ಹಾಜರಾಗುವವರು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳುವುದನ್ನು ನಿಷೇದಿಸಲಾಗಿದೆ.
2. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹವಲ್ಲದ ಅರ್ಜಿಯನ್ನು ಇಲಾಖೆಯು ತಿರಸ್ಕರಿಸಿದಲ್ಲಿ ಪಾವತಿಸಿರುವ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಇದಕ್ಕೆ ಪ್ರಾಂಶುಪಾಲರೇ ನೇರ ಜವಾಬ್ದಾರರಾಗುವರು ಮತ್ತು ಅವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.
3. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವಾಗ, ನೋಂದಾಯಿಸಿಕೊಳ್ಳುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಹಾಗೂ ಇಲಾಖೆ ನಿಗದಿಪಡಿಸಿರುವ ವಿಷಯಗಳನ್ನು ಮಾತ್ರ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳುವಂತೆ ಪ್ರಾಂಶುಪಾಲರು ಜವಾಬ್ದಾರಿ ವಹಿಸಬೇಕು.
4. ಭರ್ತಿ ಮಾಡಿದ OMR ಅರ್ಜಿಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ನಿಗಧಿತ ದಿನಾಂಕದಂದು ಕೇಂದ್ರ ಕಛೇರಿಯ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು / ಸಿಬ್ಬಂದಿಯವರು ನೇರವಾಗಿ ಸಲ್ಲಿಸಬೇಕು ಹಾಗೂ ಸಲ್ಲಿಸಿದ ದಾಖಲೆಗಳಿಗೆ ಸ್ವೀಕೃತಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.
5. ಖಾಸಗಿ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಒಂದು ಪ್ರತ್ಯೇಕ ಮುಚ್ಚಳಿಕೆ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಇದೊಂದು ಪ್ರಮುಖ ದಾಖಲೆಯಾಗಿದ್ದು ಕೇಂದ್ರ ಕಛೇರಿಗೆ OMR ಅರ್ಜಿಗಳ ಜೊತೆಯಲ್ಲಿ ಸಲ್ಲಿಸಬೇಕು.

6. ಖಾಸಗಿ ಅಭ್ಯರ್ಥಿಗಳು OMR ಮತ್ತು ಮುಚ್ಚಳಿಕೆ ಪತ್ರದಲ್ಲಿ ನಮೂದಿಸಿರುವ ಭಾಷಾ ಮತ್ತು ಐಚ್ಛಿಕ ವಿಷಯಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆಯ್ಕೆ ಮಾಡಿಕೊಂಡ ನಂತರ ಯಾವುದೇ ಕಾರಣಕ್ಕೂ ಭಾಷಾ ಮತ್ತು ಐಚ್ಛಿಕ ವಿಷಯಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.

**III. ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಇರುವ ನಿಬಂಧನೆಗಳು ಹಾಗೂ ಶುಲ್ಕಗಳ ವಿವರ:**

1. ಖಾಸಗಿ ಅಭ್ಯರ್ಥಿಗಳು ಇಲಾಖೆಯು ನಿಗದಿಪಡಿಸುವ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ. ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗೆ ನೋಂದಾಯಿಸಿಕೊಂಡಿರುವ ಕಾಲೇಜು ಅಥವಾ ಇತರೆ ಯಾವುದೇ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುವಂತೆ ಸೂಚಿಸಲಾಗುವುದು.
2. ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಕಳುಹಿಸಲಾಗುವುದು.

**ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವ ಸಮಯದಲ್ಲಿ ಪ್ರತಿ ವಿದ್ಯಾರ್ಥಿಯು ಕಾಲೇಜಿನಲ್ಲಿ ಪಾವತಿಸಬೇಕಾದ ಶುಲ್ಕದ ವಿವರ:**

| ಕ್ರ ಸಂ. | ಶುಲ್ಕದ ವಿವರ | ಇತರರು | ಪ.ಜಾತಿ / ಪ ಪ / ಕ್ಯಾ–1 |
|---|---|---|---|
| | | ರೂ. | ರೂ. |
| 1. | ನೋಂದಣಿ ಶುಲ್ಕ (Registration Fee)<br>(ನೋಂದಣಿ ಶುಲ್ಕವನ್ನು ಕಾಲೇಜಿನಲ್ಲಿಯೇ ಉಳಿಸಿಕೊಂಡು ಅಂಚೆ ವೆಚ್ಚ ಹಾಗೂ ಪರಿಶೀಲನಾ ಶುಲ್ಕವಾಗಿ ಪ್ರಾಂಶುಪಾಲರು ಮತ್ತು ಸಿಬ್ಬಂದಿ ಉಪಯೋಗಿಸಬಹುದು) | 60-00 | 60-00 |
| 2. | ದಾಖಲಾತಿ ಶುಲ್ಕ (Admission Fee common to all) | 400-00 | 400-00 |
| 3. | ಕಾಲೇಜು ಅಭಿವೃದ್ಧಿ ಶುಲ್ಕ (ವಸೂಲಾದ ಈ ಶುಲ್ಕವನ್ನು ಕಾಲೇಜು ಸಂಚಿತ ನಿಧಿಗೆ ಜಮೆ ಮಾಡಿ ಮೂಲಭೂತ ಸೌಕರ್ಯಗಳಿಗಾಗಿ ಉಪಯೋಗಿಸಲು ಪ್ರಸ್ತಾವನೆ ಕಳುಹಿಸಿ ನಿರ್ದೇಶಕರ ಅನುಮತಿ ಪಡೆಯಬೇಕು | 1,020-00 | 1,020-00 |
| 4. | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಕ್ಯಾ–1 (ಪರೀಕ್ಷಾ ಶುಲ್ಕ) ಅಂಕಪಟ್ಟಿ ಶುಲ್ಕ | 80-00 | 80-00 |
| 5. | ಪರೀಕ್ಷಾ ಶುಲ್ಕ | 400-00 | NIL |
| | ಒಟ್ಟು | **1,960-00** | **1,560-00** |

**ಯಾವುದೇ ಕಾರಣಕ್ಕೂ ಮೇಲೆ ನಮೂದಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ವಸೂಲು ಮಾಡಬಾರದು**

**ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

| ಕ್ರಮ ಸಂಖ್ಯೆ | ವಿವರ | ಅಭ್ಯರ್ಥಿಗಳು ಕಾಲೇಜಿಗೆ ಶುಲ್ಕ ಪಾವತಿಸಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಖಜಾನೆಗೆ ಸಂದಾಯ ಮಾಡುವ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ನೇರವಾಗಿ ಇಲಾಖಾ ಕೇಂದ್ರ ಕಛೇರಿಯ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವ ದಿನಾಂಕ |
|---|---|---|---|---|
| 1. | ದಂಡ ಶುಲ್ಕವಿಲ್ಲದೆ | 05.09.2018 | 06.09.2018 | **10.09.2018** |
| 2. | ದಂಡ ಶುಲ್ಕ ದೊಂದಿಗೆ ರಜಾ ದಿನಗಳನ್ನು ಹೊರತುಪಡಿಸಿ ಪರೀಕ್ಷಾ ಶುಲ್ಕದ ಜೊತೆಗೆ ದಿನವೊಂದಕ್ಕೆ ರೂ. 50.00 ರಂತೆ ಗರಿಷ್ಠ ರೂ. 500.00 | 18.09.2018 | 19.09.2018 | **22.09.208** |

**ನಿಗದಿಗೊಳಿಸಿರುವ ದಿನಾಂಕದ ನಂತರ OMR ಅರ್ಜಿಗಳನ್ನು ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು.**

3. ಶುಲ್ಕವನ್ನು ಖಜಾನೆ ಚಲನ್ ಮೂಲಕ **"0202-01-102-01-07** (ಟ್ಯೂಷನ್ ಮತ್ತು ಇತರೆ ಶುಲ್ಕಗಳು)" ಈ ಲೆಕ್ಕಶೀರ್ಷಿಕೆಗೆ ಜಮಾ ಮಾಡಬೇಕು.
4. ಕಾಲೇಜಿನ ರಶೀತಿ ಪುಸ್ತಕದ ಮೂಲಕ ಸ್ವೀಕರಿಸಲಾದ ನೋಂದಣಿ ಶುಲ್ಕ ರೂ 60–00 ನ್ನು ಅಂಚೆ ವೆಚ್ಚ ಹಾಗೂ ಅರ್ಜಿಗಳ ಪರಿಶೀಲನಾ ಸಂಭಾವನೆಯಾಗಿ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ಸಿಬ್ಬಂದಿ ಉಪಯೋಗಿಸಿಕೊಳ್ಳುವುದು.

**IV. ಅಭ್ಯರ್ಥಿಯು ಅರ್ಜಿಯ ಜೊತೆಗೆ ಕಾಲೇಜಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:**

1. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೂಲ **(Original)** ಉತ್ತೀರ್ಣ ಪ್ರಮಾಣ ಪತ್ರದೊಂದಿಗೆ ಎರಡು ಜೆರಾಕ್ಸ್ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು.
2. ಅಭ್ಯರ್ಥಿಯ ಇತ್ತೀಚಿನ ಮೂರು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳನ್ನು **(PHOTO)** ಸಲ್ಲಿಸಬೇಕು. (ಪಾಸ್‌ಪೋರ್ಟ್ ಸೈಜಿನದಲ್ಲದೆ ಬೇರೆ ಸೈಜಿನ ಫೋಟೋವನ್ನು ಸಲ್ಲಿಸಬಾರದು).
3. ಅಭ್ಯರ್ಥಿಯು ಈ ಹಿಂದೆ ವ್ಯಾಸಂಗ ಮಾಡಿದ ಸಂಸ್ಥೆಯಿಂದ ಮೂಲ ವರ್ಗಾವಣೆ ಪತ್ರವನ್ನು **(Original Transfer Certificate)** ಪಡೆದು ನೀಡಬೇಕು.
4. ದ್ವಿತೀಯ ಪಿ.ಯು.ಸಿ. ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು, ಪಿಯುಸಿ ಮೂಲ ವರ್ಗಾವಣೆ ಪತ್ರ ಮತ್ತು ದ್ವಿತೀಯ ಪಿ.ಯು.ಸಿ. ಮೂಲ ಅನುತ್ತೀರ್ಣ ಅಂಕಪಟ್ಟಿಯನ್ನು ಸಲ್ಲಿಸಬೇಕು.
5. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ / ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಒಂದು ಭಾವಚಿತ್ರವನ್ನು ಎಸ್.ಎಸ್.ಎಲ್.ಸಿ. ಜೆರಾಕ್ಸ್ ಮಾರ್ಕ್ಸ್‌ಕಾರ್ಡ್ ಪ್ರತಿಗೆ ಅಂಟಿಸಿ ಸಲ್ಲಿಸಬೇಕು.
6. ಸ್ವವಿಳಾಸ ಬರೆದಿರುವ ಮತ್ತು ಅಂಚೆ ಚೀಟಿ ಅಂಟಿಸಿರುವ ಎರಡು ಪೋಸ್ಟಲ್ ಲಕೋಟೆಗಳನ್ನು ನೀಡಬೇಕು. ಈ ಲಕೋಟೆಗಳನ್ನು ಪ್ರಾಂಶುಪಾಲರು ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿ ತಿಳಿಸುವ ಅಥವಾ ಅವರಿಂದ ತರಿಸಿಕೊಳ್ಳುವ ಉದ್ದೇಶಕ್ಕೆ ಬಳಸಿಕೊಳ್ಳುವುದು.
7. ಅಭ್ಯರ್ಥಿಯು ಅಂಗವಿಕಲರಾಗಿದ್ದಲ್ಲಿ ಜಿಲ್ಲಾ ಸರ್ಜನ್‌ರವರಿಂದ ದೃಢೀಕರಿಸಿದ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕು.
8. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಸಲ್ಲಿಸಬೇಕು.
9. ದೃಢೀಕೃತ ಆಧಾರ್ ಕಾರ್ಡ್‌ನ ಪ್ರತಿ

**V. ಪ್ರಾಂಶುಪಾಲರು ಖಾಸಗಿ ಅಭ್ಯರ್ಥಿಗಳ ಹೆಸರನ್ನು ನೋಂದಾಯಿಸಿಕೊಳ್ಳುವಾಗ ವಿಶೇಷವಾಗಿ ಗಮನಹರಿಸಬೇಕಾದ ಅಂಶಗಳು:**

1. ಖಾಸಗಿ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಲು ಇಚ್ಛಿಸಿದಲ್ಲಿ ಪ್ರಾಚಾರ್ಯರು ಇಲಾಖೆಯಿಂದ ಪೂರ್ವಾನುಮತಿ ಪಡೆದುಕೊಳ್ಳುವುದು.
2. OMR ನಮೂನೆಗಳನ್ನು ಎಚ್ಚರಿಕೆಯಿಂದ ಭರ್ತಿ ಹಾಗೂ ಶೇಡಿಂಗ್ ಮಾಡಬೇಕು.
3. ಕಾಲೇಜಿನ ಸಮೀಪದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳನ್ನು ಮಾತ್ರ ನೋಂದಾಯಿಸಿಕೊಳ್ಳುವುದು. ವಾಸಸ್ಥಳದ ಅಥವಾ ಉದ್ಯೋಗದ ದೃಢೀಕರಣಕ್ಕೆ ಸೂಕ್ತ ದಾಖಲೆಗಳನ್ನು ಪಡೆದು ಪರಿಶೀಲಿಸಿ ದೃಢಪಡಿಸಿಕೊಳ್ಳುವುದು.
4. ಅಭ್ಯರ್ಥಿಯ ವಾಸಸ್ಥಳಕ್ಕೆ ಹತ್ತಿರದ ಪ್ರದೇಶದಲ್ಲಿ ಬೇರೆ ಸರ್ಕಾರಿ ಪದವಿ ಪೂರ್ವ ಕಾಲೇಜು ಇದ್ದಲ್ಲಿ, ಅಂತಹ ಅಭ್ಯರ್ಥಿಗೆ ಆ ಕಾಲೇಜಿನಲ್ಲಿಯೇ ನೋಂದಾಯಿಸಿಕೊಳ್ಳಲು ತಿಳಿಸುವುದು.
5. ಖಾಸಗಿ ಅಭ್ಯರ್ಥಿಗಳಿಗಾಗಿಯೇ ಪ್ರತ್ಯೇಕ ದಾಖಲಾತಿ ವಹಿಯನ್ನು **(Admission Register)** ತೆರೆಯುವುದು. ಹಿಂದಿನ ವರ್ಷಗಳಲ್ಲಿಯೇ ದಾಖಲಾತಿ ವಹಿಯನ್ನು ತೆರೆದಿದ್ದಲ್ಲಿ, ಅದರಲ್ಲಿಯೇ ಮುಂದುವರಿಸುವುದು ಹಾಗೂ ರೆಗ್ಯೂಲರ್ ವಿದ್ಯಾರ್ಥಿಗಳ ರೀತಿ ಎಲ್ಲಾ ವಿವರಗಳನ್ನು ದಾಖಲಿಸುವುದು.

6. ಅಭ್ಯರ್ಥಿಗಳಿಂದ ಪಡೆಯುವ ಮೂರು ಭಾವಚಿತ್ರಗಳಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ / ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಎರಡು ಫೋಟೋಗಳಲ್ಲಿ ಒಂದನ್ನು ಎಸ್.ಎಸ್.ಎಲ್.ಸಿ. ಜೆರಾಕ್ಸ್ ಮಾರ್ಕ್ಸ್‌ಕಾರ್ಡ್‌ಗೆ ಅಂಟಿಸಬೇಕು. ಇನ್ನೊಂದು ಭಾವಚಿತ್ರವನ್ನು ದಾಖಲಾತಿ ಪುಸ್ತಕದಲ್ಲಿ ಅಂಟಿಸಿ ವಿದ್ಯಾರ್ಥಿಯ ಸಹಿ ಪಡೆಯಬೇಕು. **ದೃಢೀಕರಣವಿಲ್ಲದ ಮೂರನೇ ಫೋಟೋವನ್ನು** OMR ಅರ್ಜಿಯ ಮೇಲೆ ಅಂಟಿಸಬೇಕು.
7. ನೋಂದಣಿ ಸಮಯದಲ್ಲಿ ಅಭ್ಯರ್ಥಿಗಳಿಂದ ಪಡೆಯುವ ಮೂಲ ವರ್ಗಾವಣೆ ಪತ್ರ ಹಾಗೂ ಇನ್ನಿತರೆ ದಾಖಲೆಗಳ ಪ್ರತಿಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು. **ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರವನ್ನು ಮಾತ್ರ ಪ್ರವೇಶ ಪತ್ರ ವಿತರಿಸಿದ ನಂತರ ಅಭ್ಯರ್ಥಿಗಳಿಗೆ ಹಿಂತಿರುಗಿಸುವುದು.**
8. ಬೆಂಗಳೂರು ನಗರದ ಪ್ರತಿ ಕಾಲೇಜಿನಲ್ಲಿ ಗರಿಷ್ಠ 200 (ಇನ್ನೂರು) ಅಭ್ಯರ್ಥಿಗಳನ್ನು ನೋಂದಾಯಿಸಿಕೊಳ್ಳುವುದು. ನಿಗದಿಪಡಿಸಿದ ಸಂಖ್ಯೆಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ನೋಂದಾಯಿಸಿಕೊಳ್ಳುವ ಮುನ್ನ ಕೇಂದ್ರ ಕಛೇರಿಯಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆದುಕೊಳ್ಳುವುದು.
9. ಕರೆಸ್ಪಾಂಡೆನ್ಸ್ ಕಾಲೇಜುಗಳು ಎಂಬ ಹೆಸರಿನೊಂದಿಗೆ ವ್ಯವಹರಿಸುವ ಅಥವಾ ಯಾರೇ ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳನ್ನು ಮಾನ್ಯ ಮಾಡದೆ ಅವುಗಳನ್ನು ತಿರಸ್ಕರಿಸುವುದು. ಪ್ರತಿ ಅಭ್ಯರ್ಥಿಯು ವೈಯಕ್ತಿಕವಾಗಿ ನೋಂದಾಯಿಸಿಕೊಳ್ಳಲು ಬಂದಲ್ಲಿ ಮಾತ್ರ ಮಾನ್ಯ ಮಾಡುವುದು. ಅಭ್ಯರ್ಥಿಯ ಪರವಾಗಿ ಮತ್ತೊಬ್ಬರು ಅರ್ಜಿ ಸಲ್ಲಿಸಲು ಅವಕಾಶ ನೀಡಬಾರದು.
10. OMR ಅರ್ಜಿ ಹಾಗು ಶುಲ್ಕವನ್ನು ಸ್ವೀಕರಿಸುವಾಗ,. ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೋಂದಾಯಿಸಿಕೊಳ್ಳುವುದು.
11. ಬಾಲಕಿಯರ ಕಾಲೇಜಿನಲ್ಲಿ ಬಾಲಕಿಯರನ್ನು ಮಾತ್ರ ನೋಂದಾಯಿಸಿಕೊಳ್ಳಬೇಕು.
12. ಕಾಲೇಜಿನ ಇಬ್ಬರು ಉಪನ್ಯಾಸಕರು ದಾಖಲೆಗಳ ಆಧಾರದ ಮೇಲೆ OMR ನಮೂನೆಗಳಲ್ಲಿ ಅಭ್ಯರ್ಥಿಗಳ ಮಾಹಿತಿ ಭರ್ತಿ ಮಾಡಿ ಶೇಡಿಂಗ್ ಮಾಡುವ ಕಾರ್ಯವನ್ನು ನಿರ್ವಹಿಸುವುದು. ಈ ಸಂಬಂಧ ಅನುಬಂಧದಲ್ಲಿ ನೀಡಿರುವಂತೆ ದಸ್ತಾವೇಜನ್ನು ಪ್ರತಿ ಅಭ್ಯರ್ಥಿಗೆ ದ್ವಿಪ್ರತಿಯಲ್ಲಿ ಸಿದ್ಧಪಡಿಸಿ, ಒಂದು ಪ್ರತಿಯನ್ನು ಇತರ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
13. ಅಭ್ಯರ್ಥಿಗಳಿಂದ ಮೂಲ ದಾಖಲೆಗಳನ್ನು ಪಡೆಯುವುದರ ಜೊತೆಗೆ, ಅವುಗಳ ಎರಡು ಜೆರಾಕ್ಸ್ ಪ್ರತಿಗಳನ್ನು ಪಡೆದು ಅವುಗಳನ್ನು ಮೂಲ ಪ್ರತಿಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿ ಒಂದು ಸೆಟ್ ಜೆರಾಕ್ಸ್ ದಾಖಲಾತಿ ಪ್ರತಿಗಳನ್ನು OMR ಅರ್ಜಿಯೊಡನೆ ಪ್ರತ್ಯೇಕವಾಗಿ ಸಲ್ಲಿಸಬೇಕು. ಉಳಿದ ಒಂದು ಮೂಲ ಹಾಗೂ ಒಂದು ಜೆರಾಕ್ಸ್ ದಾಖಲಾತಿ ಪ್ರತಿಗಳನ್ನು ಕಾಲೇಜಿನಲ್ಲಿಯೇ ಇಟ್ಟುಕೊಳ್ಳುವುದು ಹಾಗೂ ಪರಿಶೀಲನೆಯ ಸಂದರ್ಭದಲ್ಲಿ ಸಲ್ಲಿಸುವುದು.
14. ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಕಾಲೇಜಿನ ಹಂತಕ್ಕೆ ನಿಗದಿಗೊಳಿಸಿರುವುದರಿಂದ ಕಾಲೇಜಿನ ಪ್ರಾಂಶುಪಾಲರು ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ ನೈಜತೆಯನ್ನು ಖಚಿತಪಡಿಸಿಕೊಂಡ ನಂತರ ನೋಂದಾಯಿಸಿಕೊಳ್ಳುವುದು. **ದ್ವಿಪ್ರತಿ ವರ್ಗಾವಣೆ ಪತ್ರದ (DUPLICATE TC) ಆದಾರದ ಮೇಲೆ ನೋಂದಾಯಿಸಿಕೊಂಡಲ್ಲಿ ಅಂತಹ ಅಭ್ಯರ್ಥಿಗಳ ನೋಂದಣಿಯನ್ನು ರದ್ದುಪಡಿಸಲಾಗುವುದು ಹಾಗೂ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.**
15. ತಿರಸ್ಕರಿಸಲಾದ ಅರ್ಜಿಗಳ ವಿವರಗಳನ್ನು ಸಂಬಂಧಿಸಿದ ಪ್ರಾಚಾರ್ಯರ ಗಮನಕ್ಕೆ ತರಲಾಗುವುದು.
16. **ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಗಳನ್ನು ರ‍್ಯಾಂಡಮ್ ಆಗಿ ಆಯ್ಕೆ ಮಾಡಿ ಪ್ರವೇಶ ಪತ್ರಗಳನ್ನು ನೀಡಲಾಗುವುದು.**
17. ನಿರ್ದೇಶನಾಲಯದಿಂದ ಹಾಗೂ ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಅಧಿಕಾರಿಗಳು ತಪಾಸಣೆ ಮಾಡಲು ಬರುವುದರಿಂದ ಪರಿಶೀಲನೆಗಾಗಿ ಮೂಲ ದಾಖಲೆಗಳನ್ನು ಒದಗಿಸುವುದು.

## VI. OMR ನಮೂನೆಗಳೊಂದಿಗೆ ಪ್ರಾಂಶುಪಾಲರು ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:

1 ಭರ್ತಿ ಹಾಗೂ ಶೇಡಿಂಗ್ ಮಾಡಲಾದ OMR ನಮೂನೆಗಳನ್ನು ಪ್ರತ್ಯೇಕ ಲಕೋಟೆಗಳಲ್ಲಿ (INNER COVER) ಹಾಕವುದು. ಒಂದು ಲಕೋಟೆಯಲ್ಲಿ ಗರಿಷ್ಠ 100 OMR ಗಳನ್ನು ಮಾತ್ರ ತುಂಬಿಸುವುದು. ಹಾಗೂ ಪ್ರತಿಯೊಂದು ಲಕೋಟೆಯ ಮೇಲೆ ಲಕೋಟೆ ಸಂಖ್ಯೆಯನ್ನು ನಮೂದಿಸುವುದು.

(ಉದಾ: 3 ಲಕೋಟೆಗಳು ಇದ್ದಲ್ಲಿ 1/3, 2/3, 3/3..................) ಲಕೋಟೆಗಳ ಮೇಲೆ OMR ಗಳ ಒಟ್ಟು ಸಂಖ್ಯೆಯನ್ನು ಕಡ್ಡಾಯವಾಗಿ ಲಕೋಟೆಯ ಮೇಲೆ ನಮೂದಿಸುವುದು.

2 10ನೇ ತರಗತಿಯ ಉತ್ತೀರ್ಣ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ, ವರ್ಗಾವಣೆ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ, ವಾಸಸ್ಥಳದ ದೃಢೀಕರಣ ಪತ್ರ, ಭರ್ತಿ ಮಾಡಿ ದೃಢೀಕರಿಸಿದ ಅನುಬಂಧ ಮತ್ತು ಆಯ್ಕೆ ಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಪಡೆದ ದೃಢೀಕರಿಸಿದ ಮುಚ್ಚಳಿಕೆ ಪತ್ರ

3 ಶುಲ್ಕ ಪಾವತಿಸಿರುವ ಮೂಲ ಚಲನ್ ಹಾಗೂ ಶುಲ್ಕ ಪಾವತಿಸಿದ ಎಲ್ಲಾ ವಿವರಗಳ Fee Statement.

4 ದೃಢೀಕೃತ ಆಧಾರ್ ಕಾರ್ಡ್‌ನ ಪ್ರತಿ

5 OMR ನಮೂನೆಗಳು ಹಾಗೂ ದಾಖಲಾತಿ ಜೆರಾಕ್ಸ್ ಪ್ರತಿಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ, ಪ್ರತ್ಯೇಕ ಕಟ್ಟುಗಳನ್ನು ಮಾಡುವುದು. OMR ನಮೂನೆಗಳಿಗೆ ನೀಡಲಾಗುವ ಕ್ರಮ ಸಂಖ್ಯೆಯನ್ನೇ ಜೆರಾಕ್ಸ್ ಪ್ರತಿಗಳಿಗೆ ನೀಡಿ ಜೆರಾಕ್ಸ್ ದಾಖಲೆ ಹಾಗೂ Fee Statement ಮತ್ತು ಶುಲ್ಕ ಪಾವತಿಸಿದ ಚಲನ್‌ನನ್ನು ಒಂದೇ ಲಕೋಟೆಯಲ್ಲಿಡುವುದು. OMR ನಮೂನೆಗಳನ್ನು ಮಾತ್ರ ಪಾಲಿಥಿನ್ ಕವರ್‌ನಲ್ಲಿರಿಸುವುದು.

6 ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಗಳ ನೋಂದಣಿ ಇಲ್ಲದಿದ್ದಲ್ಲಿ ಕಡ್ಡಾಯವಾಗಿ "ಶೂನ್ಯ ವರದಿಯನ್ನು" (Nil Report) ಕಳುಹಿಸುವುದು.

7 ಉಪಯೋಗಿಸದೆ ಇರುವ Blank OMR ಗಳನ್ನು ಕಡ್ಡಾಯವಾಗಿ ಶೂನ್ಯ ವರದಿಯ ಜೊತೆಗೆ ಕೇಂದ್ರ ಕಛೇರಿಗೆ ಹಿಂತಿರುಗಿಸುವುದು.

8 ಅಭ್ಯರ್ಥಿಗಳಿಂದ ಪಡೆದ ಇನ್ನುಳಿದ ದಾಖಲೆಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು.

OMR ನಮೂನೆಗಳು ಹಾಗೂ ಮೇಲೆ ತಿಳಿಸಿರುವ ದಾಖಲೆಗಳನ್ನು ಬಂಡಲ್ ಮಾಡಿ ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ ಮತ್ತು ವಿಳಾಸದೊಂದಿಗೆ **"ಖಾಸಗಿ ಅಭ್ಯರ್ಥಿಗಳ ಅರ್ಜಿಗಳು"** ಎಂದು ನಮೂದಿಸಿ ದಂಡ ಶುಲ್ಕ ರಹಿತ ಸಲ್ಲಿಕೆಯಾದ ಅರ್ಜಿಗಳನ್ನು ಬರೆದು ದಿನಾಂಕ **10.09.2018** (ದಂಡ ಶುಲ್ಕವಿಲ್ಲದ OMR ಅರ್ಜಿಗಳನ್ನು) ಮತ್ತು ದಂಡ ಶುಲ್ಕ ಸಹಿತ ಅರ್ಜಿಗಳನ್ನು ದಿನಾಂಕ **22.09.2018** ರಂದು **ಕಾಲೇಜಿನವರು ಅರ್ಜಿಗಳನ್ನು ನೇರವಾಗಿ ಇಲಾಖಾ ಕೇಂದ್ರ ಕಛೇರಿಯ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು. ಯಾವುದೇ ಕಾರಣಕ್ಕೂ OMR ಅರ್ಜಿಗಳನ್ನು ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬಾರದು.**

**VII. ಖಾಸಗಿ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾದ ನಂತರ ಪ್ರಾಚಾರ್ಯರು ಅಭ್ಯರ್ಥಿಗಳಿಗೆ ನೀಡಬೇಕಾದ ದಾಖಲೆಗಳು.**

ಖಾಸಗಿ ಅಭ್ಯರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಜೊತೆಗೆ ವರ್ಗಾವಣೆ ಪತ್ರ ನೀಡುವುದು.

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಯನ್ನು :**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಅಂಟಿಸಲು ತಿಳಿಸಿದೆ.
2. ಪಿ.ಯು.ಸಿ. ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ. ಪ್ರತಿಯನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಅಂಟಿಸಲು ತಿಳಿಸಿದೆ.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕಶಾಖೆಗೆ.
5. ಇಲಾಖಾ ಇ-ಆಡಳಿತ ಶಾಖೆಗೆ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಮಾಧ್ಯಮಗಳಲ್ಲಿ ಪ್ರಕಟವಾಗುವಂತೆ ಕ್ರಮ ಕೈಗೊಳ್ಳಲು.
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಪರೀಕ್ಷೆ/ಮುಚ್ಚಳಿಕೆ ಪತ್ರ/2018-19. ದಿನಾಂಕ: .0 .2018.

## ಮುಚ್ಚಳಿಕೆ ಪತ್ರ

ಅಭ್ಯರ್ಥಿ ........................................................ ತಂದೆ ........................................ಎಸ್‌ಎಸ್‌ಎಲ್‌ಸಿ ನೋಂದಣಿ ಸಂಖ್ಯೆ ................................... ಆದ ನಾನು ಸರ್ಕಾರಿ ಪದವಿ ಪೂರ್ವ ಕಾಲೇಜು ........................................................... ಮುಖಾಂತರ ಖಾಸಗಿ ಅಭ್ಯರ್ಥಿಯಾಗಿ 2019ರ ಮಾರ್ಚ್ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಲು ಅರ್ಜಿ ಸಲ್ಲಿಸಿ, ಕೆಳಕಂಡ ಭಾಷಾ ಮತ್ತು ಐಚ್ಛಿಕ ವಿಷಯಗಳನ್ನು 2019ರ ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿರುತ್ತೇನೆ.

**ಆಯ್ಕೆಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳು :**

### ಭಾಷಾ ವಿಷಯಗಳು

| ಕ್ರಮ ಸಂಖ್ಯೆ | ಭಾಷಾ ವಿಷಯಗಳು | ವಿಷಯ ಸಂಕೇತ |
|---|---|---|
| 1. | | |
| 2. | | |

### ಐಚ್ಛಿಕ ವಿಷಯಗಳು

| ಕ್ರಮ ಸಂಖ್ಯೆ | ಐಚ್ಛಿಕ ವಿಷಯಗಳು | ವಿಷಯ ಸಂಕೇತ |
|---|---|---|
| 1. | | |
| 2. | | |
| 3. | | |
| 4. | | |

ಮೇಲ್ಕಂಡ ಭಾಷಾ ವಿಷಯಗಳು ಮತ್ತು ಐಚ್ಛಿಕ ವಿಷಯಗಳು ನನ್ನ ಸ್ವ-ಇಚ್ಛೆಯಿಂದ ಮಾರ್ಚ್ 2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿರುತ್ತೇನೆ.

ಸ್ಥಳ
ದಿನಾಂಕ

ಖಾಸಗಿ ಅಭ್ಯರ್ಥಿಯ ಸಹಿ

**ದೃಢೀಕರಿಸಿದೆ.**

ಸ್ಥಳ
ದಿನಾಂಕ

ಪ್ರಾಚಾರ್ಯರ ಸಹಿ,
ಕಾಲೇಜಿನ ಮೊಹರು

**ವಿಶೇಷ ಸೂಚನೆ: ಮುಚ್ಚಳಿಕೆ ಪತ್ರ ಖಾಸಗಿ ಅಭ್ಯರ್ಥಿಯ ಕೈಬರಹದಲ್ಲಿರುವುದು ಕಡ್ಡಾಯ.**

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಪರೀಕ್ಷೆ/ಖಾ.ಅ.ಮಾ.ಒ.ನ/2018-19. ದಿನಾಂಕ: .0 .2018.

"ಅನುಬಂಧ"

## ದ್ವಿತೀಯ ಪಿಯುಸಿ ಪರೀಕ್ಷೆಯ ಖಾಸಗಿ ಅಭ್ಯರ್ಥಿಗಳ ಮಾಹಿತಿ ಒದಗಿಸುವ ನಮೂನೆ

ಅಭ್ಯರ್ಥಿ ................................................ ತಂದೆ ........................................ ಇವರು ನಮ್ಮ ಕಾಲೇಜಿನ ಮುಖಾಂತರ ಖಾಸಗಿ ಅಭ್ಯರ್ಥಿಯಾಗಿ 2019ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಗೆ ನೋಂದಾಯಿಸಲು ಅರ್ಜಿ ಸಲ್ಲಿಸಿರುತ್ತಾರೆ. ಇವರು 10ನೇ ತರಗತಿ ಪರೀಕ್ಷೆಯನ್ನು .............................. ನೋಂದಣಿ ಸಂಖ್ಯೆಯ ಮೂಲಕ ...................... ವರ್ಷದಲ್ಲಿ .................................................. ಶಾಲೆ / ಕಾಲೇಜಿನಲ್ಲಿ ತೇರ್ಗಡೆಯಾಗಿರುತ್ತಾರೆ.

ಅಭ್ಯರ್ಥಿಯು 10ನೇ ತರಗತಿ ತೇರ್ಗಡೆಯಾಗಿದ್ದು, 10ನೇ ತರಗತಿ ಪಾಸಾದ ಶಾಲೆ / ಕಾಲೇಜಿನ ಮುಖ್ಯಸ್ಥರು ಅಭ್ಯರ್ಥಿಯ ಫೋಟೋ ದೃಢೀಕರಿಸಿದ್ದಾರೆ.

ಅಭ್ಯರ್ಥಿಯು ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದು, ಪಿಯುಸಿ ಓದಿದ ಕಾಲೇಜಿನ ಪ್ರಾಚಾರ್ಯರು ಅಭ್ಯರ್ಥಿಯ ಫೋಟೋ ದೃಢೀಕರಿಸಿದ್ದಾರೆ.

10ನೇ ತರಗತಿ ಮೂಲ ಅಂಕಪಟ್ಟಿ / ಜನ್ಮ ದಿನಾಂಕ ದೃಢೀಕರಣಕ್ಕಾಗಿ ಪಡೆದ ಮೂಲ ದಾಖಲೆಗಳನ್ನು ಕಾಲೇಜಿನಲ್ಲಿ ಉಳಿಸಿಕೊಂಡು, ಇವುಗಳ ದೃಢೀಕೃತ ಫೋಟೋಪ್ರತಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ಅಭ್ಯರ್ಥಿಯು ಸಲ್ಲಿಸಿರುವ ದಾಖಲೆಗಳನ್ನು ನಾನು ಖುದ್ದಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳು ಅಸಲಿಯಾಗಿವೆ ಹಾಗೂ ಒದಗಿಸಿರುವ ಮಾಹಿತಿಗಳು ಇಲಾಖೆಯ ಅಧಿಸೂಚನೆಯ ಪ್ರಕಾರ ಸರಿಯಾಗಿದೆ. ಎಂಬುದನ್ನು ಖಚಿತಪಡಿಸಿಕೊಂಡು, ಇವರು 2019ರ ಮಾರ್ಚ್ ದ್ವಿತಿಯ ಪಿಯುಸಿ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿದ್ದಾರೆ ಎಂಬುದಾಗಿ ದೃಢೀಕರಿಸಿರುತ್ತೇನೆ. ನಮ್ಮ ಕಾಲೇಜಿನ ಇಬ್ಬರು ಹಿರಿಯ ಉಪನ್ಯಾಸಕರು ಈ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ದಾಖಲೆಗಳನ್ನು ಪರಿಶೀಲಿಸಿದ ಉಪನ್ಯಾಸಕರ ಹೆಸರು ಮತ್ತು ಸಹಿ :

| ಕ್ರಮ ಸಂಖ್ಯೆ | ಹೆಸರು | ಸಹಿ |
|---|---|---|
| 1. | | |
| 2. | | |

ಸ್ಥಳ
ದಿನಾಂಕ

ಪ್ರಾಚಾರ್ಯರ ಸಹಿ
ಕಾಲೇಜಿನ ಮೊಹರು

ಅಡಕಗಳು :

1. 10ನೇ ತರಗತಿ ಪಾಸಾದ ದೃಢೀಕೃತ ಅಂಕಪಟ್ಟಿ /ಪ್ರಮಾಣ ಪತ್ರ
2. ಮೂಲ ವರ್ಗಾಣೆ ಪತ್ರದ ದೃಢೀಕೃತ ಪತ್ರಿ
3. ವಾಸಸ್ಥಳ ದೃಢೀಕೃತ ಪತ್ರದ ದೃಢೀಕೃತ ಪತ್ರಿ
4. ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡ ಭಾಷೆ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಕೈಬರಹದ ಮುಚ್ಚಳಿಕೆ ಪತ್ರ.

OFFICE OF THE DIRECTOR, DEPARTMENT PRE-UNIVERSITY EDUCATION, $18^{TH}$ CROSS MALLESHWARM
BANGALORE 560012

# Fee Statement (for Private Candidates)

Name of the College                College code                College Seal

| 1 | 2 | 3 | 4 | 5 | | 6 | 7 | | | | 8 | 9 | 10 | 11 | 12 | 13 | 14 | 15 | 16 | 17 | 18 |
|---|---|---|---|---|---|---|---|---|---|---|---|---|---|---|---|---|---|---|---|---|---|
| | | | | Subjects code | | | Category | | | | | | | | | | | | | | |
| APP SL No. | Name | Father's name | SSLC Reg. no | Languages | Combination | Arts / Commerce | SC | ST | C1 | Others | Date of Exam fee paid | Reg fee | Admin Fee | CBC Fee | MC fee | Exam fee | Late fee | Spl late fee | Total amount | Challan no & date | Remarks |
| 6001 | | | | | | | | | | | | | | | | | | | | | |
| | | | | | | | | | | | | | | | | | | | | | |
| | | | | | | | | | | | | | | | | | | | | | |
| | | | | | | | | | | | | | | | | | | | | | |
| | | | | | | | | | | | | | | | | | | | | | |
| | | | | | | | | | | | | | | | | | | | | | |
| | Total | | | | | | | | | | | | | | | | | | | | |

Date
Place

Signature of the Principal
With Seal